1884ನೇ ಇಸವಿ ಅರ್ಜೀ ನಂಬರ್ 245.

ಮೃತಪಟ್ಟ ನಾರಣಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು) ತುಮಕೂರು ಡಿಸ್ಟ್ರಿಕ್ಟ್ ಚಿತ್ರದುರ್ಗ ಸಬ್ ಡಿವೀಜ್ ಹಿರಿಯೂರು ವೆಂಕಟಶಾಮಯ್ಯ, ಮೃತಪಟ್ಟ ಸದರೀ ನಾರಣಪ್ಪನವರಿಗೆ ಚಿಕ್ಕಪ್ಪನಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹಿರಿಯೂರು ಸ್ಥಳದ ವೆಂಕಟಶಾಮಯ್ಯನವರು ಹಿರಿಯೂರ್ ವಾಸಸ್ಥರಾಗಿ ಮೃತಪಟ್ಟ ನಾರಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಶಾಮಯ್ಯನವರ ಅರ್ಜಿಯನ್ನು 1884ನೇ ಇಸವಿ ನವೆಂಬರ್ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅಕ್ಟೋಬರ್ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 246.

ಮೃತಪಟ್ಟ ಪಟೇಲ್ ರಾಮರಾಯರ ಆಸ್ತಿ ವಿಷಯದಲ್ಲಿ—

ಅರ್ಜೀದಾರು) ತುಮಕೂರು ಡಿಸ್ಟ್ರಿಕ್ಟ್ ಮದ್ದಗಿರಿ ಗುರುರಾಯರು, ಮೃತಪಟ್ಟ ಸದರೀ ರಾಮರಾಯರಿಗೆ ಅಳಿಯನಾಗಬೇಕೆಂಬ ಹಕ್ಕುದಾರೀ ಮೇಲೆ ಮದ್ದಗಿರೀ ಸ್ಥಳದ ಗುರುರಾಯರು ತುಮಕೂರು ಡಿಸ್ಟ್ರಿಕ್ಟ್ ತುಪ್ಪೆಕೆರೆ ಸಬ್ ಡಿವೀಜ್ ಮಾಯಿಸಂದ್ರದ ಹೋಬಳಿ ವರಹಾಸಂದ್ರದ ವಾಸಸ್ಥರಾಗಿ ಮೃತಪಟ್ಟ ರಾಮರಾಯರ ಜಿಂದಗಿಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗುರುರಾಯರ ಅರ್ಜೀಯನ್ನು 1884ನೇ ಇಸವಿ ನವೆಂಬರ್ ತಿಂಗಳು ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅಕ್ಟೋಬರ್ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 248.

ಮೃತಪಟ್ಟ ಭೇರಿಕೆ ಸುಬ್ಬಯ್ಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು) ಕೃಷ್ಣರಾಜಪೇಟೆ ತಾಲ್ಲೂಕು ಚನ್ನಪಟ್ಟಣದ ರಾಮಕ್ಕ, ಮೃತಪಟ್ಟ ಸದರೀ ಭೇರಿಕೆ ಸುಬ್ಬಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಚನ್ನಪಟ್ಟಣ ಸ್ಥಳದ ರಾಮಕ್ಕನವರು ಚನ್ನಪಟ್ಟಣ ವಾಸಸ್ಥರಾಗಿ ಮೃತಪಟ್ಟ ಭೇರಿಕೆ ಸುಬ್ಬಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಕ್ಕನವರ ಅರ್ಜೀಯನ್ನು 1884ನೇ ಇಸವಿ ನವೆಂಬರ್ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭೇರಿಕೆ ಸುಬ್ಬಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ನವೆಂಬರ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 256.

ಮೃತಪಟ್ಟ ಯಜ್ಞ ನಾರಾಯಣಶಾಸ್ತ್ರಿಗಳ ಆಸ್ತಿ ವಿಷಯದಲ್ಲಿ—

ಅರ್ಜೀದಾರು) ಚಿಂತಾಮಣಿ ತಾಲ್ಲೂಕು ಕೋಟಗಲ್‌ನಲ್ಲಿ ಯಿರುವ ತ್ರಿಯಂಬಕ ಶಾಸ್ತ್ರಿ, ಮೃತಪಟ್ಟ ಸದರೀ ಯಜ್ಞ ನಾರಾಯಣ ಶಾಸ್ತ್ರಿರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಂತಾಮಣಿ ತಾಲ್ಲೂಕು ಕೋಟಗಲ್ ಸ್ಥಳದ ತ್ರಿಯಂಬಕಶಾಸ್ತ್ರಿ ಯಂಬವರು

ಚಿಂತಾಮಣಿ ತಾಲ್ಲೂಕು ಕೋಟಗಲ್ ವಾಸಸ್ಥರಾಗಿ ಮೃತಪಟ್ಟ ಯಜ್ಞ್ಞನಾರಾಯಣ ಶಾಸ್ತ್ರಿಗಳ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತ್ರಿಯಂಬಕ ಶಾಸ್ತ್ರೀರ ಅರ್ಜೀಯನ್ನು 1884ನೇ ಇಸವಿ ಡಿಶಂಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಯಜ್ಞ್ಞನಾರಾಯಣ ಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ನವಂಬರ್ ತಿಂಗಳು ತಾರೀಖು 7ಲ್ಲು ಕೋರ್ಟು ಮೊಹರ್‌ನೀಲೇ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೈಸ್,
ಸಬ್ ಜಡ್ಜ್.

ಸೆಂಟ್ರಲ್ ಜೈಲ್.

ಇಸ್ತಿಹಾರ್‌ನಾಮಾ.

ತಾರೀಖು 4ನೇ ನವಂಬರ್ 1884.

ಇದರಿಂದ ಪ್ರಕಟಿಸಲ್ಪಡುವದೇನಂದರೆ,—ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿಯೂ, ಡಿಸ್ಟ್ರಿಕ್ಟು ಲಾಕಪ್ಪಿನಲ್ಲಿಯೂ, ಖೈದ್ ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಬೇಕಾದ ಆಹಾರ ಪದಾರ್ಥಗಳು ವಗೈರೇ ದರೋಬಸ್ತು ಜಿನಸಿಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಕೊಡಲ್ಪಡುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಸ್ಯ 1884ನೇ ಇಸವಿ ಡಿಶಂಬರ್ 1ನೇ ತಾರೀಖಿನ ವರಿಗೆ ಸೆಂಟ್ರಲ್ ಜೈಲ್ ಸೂಪರ್‌ಟಿಂಡೆಂಟರವರು ತೆಗದುಕೊಳ್ಳುವರು.

2. ಮೇಲೆ ಕಂಡ ತಾರೀಖಿಗೆ ತರುವಾಯ ದರಖಾಸ್ತುಗಳು ಯಾವವೂ ತೆಗದುಕೊಳ್ಳಲ್ಪಡಲಾರವು.

3. ದರಖಾಸ್ತುಗಳ ಮೇಲೆ "ಸೆಂಟ್ರಲ್ ಜೈಲಿಗೂ, ಡಿಸ್ಟ್ರಿಕ್ಟು ಲಾಕಪ್ಪಿಗೂ ಜಿನಸೀಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. ನಗದಾಗಿಯಾಗಲಿ ಕರೆನ್ಸಿ ನೋಟುಗಳ ಮೂಲಕವಾಗಿಯಾಗಲಿ, 500 ರೂಪಾಯಿಗಳ ಡಿಪಾಜಿಟ್ ದೇಖೀಲ್ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಸೆಂಟ್ರಲ್ ಜೈಲ್ ಸೂಪರ್‌ಟಿಂಡೆಂಟರವರಿಂದ ಅವರ ಆಫೀಸಿನಲ್ಲಿ ಮೇಲೆ ಕಂಡ ತಾರೀಖಿನೊಳಗೆ ಅಲ್ಲಿಗೆ ಬರುವದಕ್ಕೆ ಖಾಯಿಷ್ ಮಾಡುವ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ ಈಕೆಳಿಗೆ ಬರುವ ವಳ್ಳೀತರಹಾದ ಜಿನಸೀಗಳನ್ನು ರೂಪಾಯಿ 1ಕ್ಕೆ ಪೂರ್ಡ್ ತೂಕದ ಪ್ರಕಾರ ಸರಬರಾಯಿ ಮಾಡತಕ್ಕ ದರವನ್ನು ನಮೂದಿಸತಕ್ಕದ್ದು.

ಅಕ್ಕಿ	ಹೇ ಅಕ್ಕಿ ವ ಕುದಪಲ ಅಕ್ಕಿ	...	ತರಕಾರಿ
ರಾಗಿ	.. ..	..	ಹುರಳಿ
ಬೇಳೆ	.. ..	..	ಚವೆ
ಅವರೆ	.. ..	..	ಸಕ್ಕರೆ
ಮೊಂಸ	.. ..	..	ಕಾಫಿ
ಮೊಸರು	.. ..	...	ತೇ ಯಲೆ
ಯಳ್ಳೆಂಣೆ	.. ..	..	ರೊಟ್ಟಿ
ತುಪ್ಪ	.. ..	..	ಹಾಲು
ಹುಣಸೇಹಣ್ಣು	.. ..	..	ಶೇಗೆಕಾಯಿ
ಉಪ್ಪು	.. ..	..	ಸಬ್ಬು
ಮಸಾಲೆ ಪುಡಿ	.. ..	..	ಗೇರುಬೀಜ
ಈರುಳ್ಳಿ	.. ..	..	ಮೆಣಸು
ಬೆಳ್ಳುಳ್ಳಿ	.. ..	..	ಮಣಗಿದ ಸಾಮೆ